ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 09 : 20

ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ

ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರಗಳು
ಅ.	ಸಿಂಗಟಾಲೂರು ಯೋಜನೆಯಲ್ಲಿ ಎಷ್ಟು ಟಿ.ಎಂ.ಸಿ ನೀರನ್ನು ಕಾಯ್ದಿರಿಸಲಾಗಿದೆ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)	ಸರ್ಕಾರದ ಆದೇಶ ಸಂ.ಐ.ಡಿ 90 ಎಂಟಿಪಿ 98 ದಿನಾಂಕ 29/12/2000 ಸಿಂಗಟಾಲೂರು ಏತ ನೀರಾವರಿ ಯೋಜನೆಗೆ 18.55 ಟಿ.ಎಂ.ಸಿ. ನೀರಿನ ಹಂಚಿಕೆಯೊಂದಿಗೆ ರೂ.595.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ತದನಂತರ, ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಆತಂಕದ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂ:ಜಸಂಇ 115 ವಿಬ್ಯಾಇ 2003 ದಿನಾಂಕ 29/6/06 ರಲ್ಲಿ ಈ ಯೋಜನೆಯನ್ನು 12.03ಟಿ.ಎಂ.ಸಿ. ನೀರು ಬಳಸಿ ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ. ಈ ಆದೇಶದಲ್ಲಿ ಯೋಜನೆಯಡಿ 12.03 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು ಮೂಲ ಸೌಕರ್ಯವನ್ನು ಸೃಜಿಸುವ ಅವಕಾಶವನ್ನು ಕಲ್ಪಿಸಿ, 7.64ಟಿ.ಎಂ.ಸಿ. ನೀರನ್ನು ಮೊದಲನೇ ಹಂತದಲ್ಲಿ ಉಪಯೋಗಿಸಿಕೊಳ್ಳಲು ಮತ್ತು ಉಳಿದ 4.39 ಟಿ.ಎಂ.ಸಿ. ನೀರಿನ ಬಳಕೆಗೆ ಬೇಕಾದ ಕಾಮಗಾರಿಗಳನ್ನು ಎರಡನೆ ಹಂತದಲ್ಲಿ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ ಮತ್ತು ಉಳಿದ 6.52 ಟಿ.ಎಂ.ಸಿ. ನೀರನ್ನು ಉಪಯೋಗಿಸಲು ಈ ಎರಡೂ ಹಂತಗಳ ಕಾಮಗಾರಿಗಳು ಪೂರ್ಣಗೊಂಡ ನಂತರ ಸಮಗ್ರವಾಗಿ ಪರಿಶೀಲಿಸಲು ಆದೇಶಿಸಲಾಗಿದೆ. ಸಿಂಗಟಾಲೂರು ಏತ ನೀರಾವರಿ ಯೋಜನೆಯಡಿ ತಾಲ್ಲೂಕುವಾರು ನೀರಾವರಿ ಪ್ರದೇಶಗಳ ವಿವರ ಈ ಕೆಳಕಂಡಂತಿದೆ. ಬಲ ಭಾಗಕ್ಕೆ 1 ಹೂವಿನ ಹಡಗಲಿ 35791ಎಕರೆ 3.59ಟಿ.ಎಂ.ಸಿ.

ಆ.	ಹಂಚಿಕೆಯಾದ ನೀರಿನಿಂದ ಯಾವ ತಾಲೂಕುಗಳು, ಎಷ್ಟು ಎಕರೆ ನೀರಾವರಿ ಸೌಲಭ್ಯಕ್ಕೆ ಒಳಪಟ್ಟಿವೆ?	ಎಡಭಾಗಕ್ಕೆ 2 ಮುಂಡರಗಿ 32982 ಎಕರೆ 3 ಕೊಪ್ಪಳ 12390 ಎಕರೆ 8.44 ಟಿ.ಎಂ.ಸಿ. 4 ಗದಗ 39073 ಎಕರೆ 2 ಒಟ್ಟು 120236 ಎಕರೆ 12.03 ಟಿ.ಎಂ.ಸಿ.
ಇ.	ಕೊಪ್ಪಳ ತಾಲ್ಲೂಕಿನಲ್ಲಿ ನಿಗದಿ ಪಡಿಸಿದ ನೀರಾವರಿಯ ಅಚ್ಚು ಕಟ್ಟು ಪ್ರದೇಶಗಳೆಷ್ಟು?	ಸಿಂಗಟಾಲೂರು ಏತ ನೀರಾವರಿ ಯೋಜನೆಯಡಿ ಕೊಪ್ಪಳ ತಾಲ್ಲೂಕಿನ ನಿಗದಿಪಡಿಸಿದ ನೀರಾವರಿ ಅಚ್ಚುಕಟ್ಟು ಪ್ರದೇಶ 12,390 ಎಕರೆ ಇರುತ್ತದೆ.
ಈ.	ಸ್ಕೀಂ 'ಬಿ' ಯೋಜನೆಯಲ್ಲಿ ಕೊಪ್ಪಳ ಜಿಲ್ಲೆಗೆ ನಿಗದಿಪಡಿಸಿದ ನೀರಿನ ಪ್ರಮಾಣ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು)	ಕೊಪ್ಪಳ ಏತ ನೀರಾವರಿ ಯೋಜನೆಯು ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ-ಬಿರಡಿಯಲ್ಲಿ ಒಂದು ಉಪ ಯೋಜನೆಯಾಗಿರುತ್ತದೆ. ಸದರಿ ಯೋಜನೆಗೆ ತಾತ್ಕಾಲಿಕವಾಗಿ ನಿಗದಿಪಡಿಸಿದ ನೀರಿನ ಪ್ರಮಾಣ 11.565 ಟಿ.ಎಂ.ಸಿ. ಆಗಿರುತ್ತದೆ. ಇದರಿಂದ ಕೊಪ್ಪಳ ಜಿಲ್ಲೆಯ ಈ ಕೆಳಕಂಡ ಮೂರು ತಾಲ್ಲೂಕುಗಳಿಗೆ ನೀರನ್ನು ಒದಗಿಸಲು ಉದ್ದೇಶವಿದೆ. 1. ಕುಷ್ಟಗಿ - 8,545 ಹೆ. 2. ಕೊಪ್ಪಳ - 7,330 ಹೆ. 3. ಯಲಬುರ್ಗ - 16,848 ಹೆ.
ಉ.	ಸ್ಕೀಂ 'ಬಿ' ಯೋಜನೆಯಲ್ಲಿ ಏತ ನೀರಾವರಿ ಯೋಜನೆಗಾಗಿ ಜಿಲ್ಲೆಯ ಎಷ್ಟು ಗ್ರಾಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಗ್ರಾಮಗಳಿಗೆ ಎಷ್ಟು ಟಿ.ಎಂ.ಸಿ ನೀರನ್ನು ಬಳಸಲಾಗುತ್ತಿದೆ? (ವಿವರಗಳನ್ನು ನೀಡುವುದು)	ಸದರಿ ಯೋಜನೆಯು ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ-ಬಿ ರಡಿಯಲ್ಲಿ ಪ್ರಸ್ತಾವನೆಯಾಗಿರುತ್ತದೆ. ಸ್ಕೀಂ-ಬಿ ರಡಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಕೃಷ್ಣಾ ನ್ಯಾಯಾಧಿಕರಣ ರಚನೆಗೊಂಡಿದ್ದು, ನ್ಯಾಯಾಧಿಕರಣದ ಕಲಾಪಗಳು ಪ್ರಗತಿಯಲ್ಲಿವೆ. ನ್ಯಾಯಾಧಿಕರಣದ ಅಂತಿಮ ತೀರ್ಪು ಬಂದ ನಂತರ ತನಿಖೆ ಮತ್ತು ಸರ್ವೆ ಕಾರ್ಯ ಕೈಗೊಂಡು ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುವುದು. ಹೀಗಾಗಿ ಎಷ್ಟು ಗ್ರಾಮಗಳು ನೀರಾವರಿಗೆ ಒಳಪಡಲಿವೆ ಎಂಬುವುದು ಸಧ್ಯಕ್ಕೆ ತಿಳಿದುಬರುವುದಿಲ್ಲ.
ಊ.	ಯೋಜನೆಯನ್ನು ಸರ್ಕಾರ ಯಾವಾಗ ಪ್ರಾರಂಭಿಸುವುದು?	